ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಿಮತ್ತೆ ಇದಕ್ಕೆ ಫೈನಲ್ ಪೇಮೆಂಟ್ ಬಗ್ಗೆ ವಿತ್-ಹೆಲ್ಡ್ ಮಾಡಿದ್ದೀರಿ. ತಾವು ಆ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ? ನಿಮ್ಮ ಪಿ.ಡಬ್ಲ್ಯೂ.ಡಿ. ಕೋಡ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಹೆಚ್.ಕೆ ಪಾಟೀಲ್ : ಮಾನ್ಯ ಬಿ.ಬಿ. ಶಿವಪ್ಪನವರು ಹೇಳಿದ ಹಾಗೆ ಈ ರಸ್ತೆ ಗುಣಮಟ್ಟದ ಬಗ್ಗೆ ತನಿಖೆ ಮಾಡುವುದಕ್ಕೆ ನಮ್ಮ ಇಲಾಖೆಯ ಜಾಗೃತ ದಳ ಸಮಿತಿಯನ್ನು ಕಳುಹಿಸುತ್ತೇವೆ. ಮಾನ್ಯ ಬೈರೇಗೌಡರು ಹೇಳಿದ ಪಾಟ್-ಹೋಲ್ಸ್ ಬಗ್ಗೆ ಅದು ಕಳಪೆ ಕೆಲಸವೆಂದು ಗೊತ್ತಾದ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದೆಂದು ಕೇಳಿದ್ದಾರೆ. ಈ ಬಗ್ಗೆ ನಾವು ಒಂದು ಪ್ರೊಸೀಜರ್ ಫಾಲೋ ಮಾಡಬೇಕು, ಕೆಲವು ಸಂದರ್ಭಗಳಲ್ಲಿ ಪಾಟ್-ಹೋಲ್ಸ್ ಮಳೆಯಿಂದಲೂ ಬಂದಿರುವ ಸಾಧ್ಯತೆಗಳು ಇರುತ್ತದೆ, ಅದು ಏನೆಂಬುದು ಗೊತ್ತಿಲ್ಲ. ಈಗ ನಾವು ಊಹೆಗೆ ಒಳಪಡು ವುದು ಬೇಡ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ರಸ್ತೆ ಮಾಡುವಂಥಾದ್ದು ಮಳೆ ಬಂದರೆ ಕೊಚ್ಚಿಕೊಂಡು ಹೋಗುವುದಕ್ಕಲ್ಲ, ದಯಮಾಡಿ ಅದನ್ನು ತಾವು ಅರ್ಥ ಮಾಡಿಕೊಳ್ಳಿ.

ಶ್ರೀ ಹೆಚ್.ಕೆ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪಾಟ್-ಹೋಲ್ಸ್ ಎಂದರೆ ಕೊಚ್ಚಿಕೊಂಡು ಹೋದ ಹಾಗೆ ಅಲ್ಲ, ಅದು ಯಾರೇ ಮಾಡಿರಲಿ, ಎಲ್ಲಿಯೇ ಮಾಡಿರಲಿ, ನಮ್ಮ ಹತ್ತಿರ ಇರುವ ವರದಿ ಪ್ರಕಾರ ಮಾನ್ಯ ಬಿ.ಬಿ. ಶಿವಪ್ಪನವರು ಹೇಳಿದಹಾಗೆ ಅತ್ಯಂತ ಕಳಪೆ ಗುಮಣಟ್ಟದ ಕೆಲಸವನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿಸುತ್ತೇವೆ. ಇನ್ನು ನಾವು ಈಗಾಗಲೇಲ ಹೇಳಿದ ಹಾಗೆ ಕೊನೆಯ ಬಿಲ್ ತಯಾರು ಮಾಡುವಂಥಾದ್ದನ್ನು ನಿಲ್ಲಿಸಲಾಗಿದೆ. ಅದು ಕಳಪೆ ಕೆಲಸವೆನ್ನುವ ವರದಿ ಬಂದರೆ ಯಾವ ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳ ಬೇಕೋ, ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ನಾವು ತೆಗೆದುಕೊಳ್ಳತ್ತೇವೆ.

ಕೊಪ್ಪಳ ಜಿಲ್ಲೆಯಲ್ಲಿ ದರೋಡೆ, ಸುಲಿಗೆ ಹಾಗೂ ಸಂಶಯಾಸ್ಪದ ಸಾವುಗಳ ಕುರಿತು

239 (2513) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದರೋಡೆ ಸುಲಿಗೆ ಸಂಶಯಾಸ್ಪದ ಸಾವುಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರದ ಇದನ್ನು ತಡೆಯಲು ಯಾವ ಕ್ರಮ ಕೈಗೊಂಡಿದೆ ಮತ್ತು ಸದರಿ ಸಾಲಿನಲ್ಲಿ ದರೋಡೆ, ಸುಲಿಗೆ ಹಾಗೂ ಸಾವುಗಳು ಎಷ್ಟು ನಡೆದಿದೆ? (ವಿವರವನ್ನು ಒದಗಿಸುವುದು)

ಆ) ಸದರಿ ದರೋಡೆ ಸುಲಿಗೆ ಸಂಶಯಾಸ್ಪದ ಸಾವುಗಳಿಗೆ ಹೊರ ರಾಜ್ಯದ ಮಾಫೀಯಾ ಗುಂಪಿನ ಕೈವಾಡವೇನಾದರೂ ಇದೆಯೇ ಇದ್ದರೆ ಇಲಾಖೆ ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಬಂದಿದೆ, ವಿವರಗಳು ಈ ಕೆಳಕಂಡಂತಿವೆ :

ಕ್ರ. ಸಂ.	ವರ್ಷ	ದರೋಡೆ ಪ್ರಕರಣಗಳು	ಸುಲಿಗೆ ಪ್ರಕರಣಗಳು	ಸಂಶಯಾಸ್ಪದ ಸಾವಿನ ಪ್ರಕರಣಗಳು
1.	1999	10	3	12
2.	2000	1	-	4

(9-4-2000ವರೆವಿಗೆ)

ತೆಗೆದುಕೊಂಡು ಕ್ರಮ

1. ಜಿಲ್ಲೆಯಾದ್ಯಂತ ಗಸ್ತನ್ನು ಬಿಗಿಗೊಳಿಸಲಾಗಿದೆ.
2. ರಾತ್ರಿಯಲ್ಲಿ ವಾಹನಗಳನ್ನು ಪೋಲೀಸ್ ಗಸ್ತಿನೊಂದಿಗೆ ಒಟ್ಟೊಟ್ಟಿಗೆ ಕಳಿಸಲಾಗುತ್ತಿದೆ.
3. ಜಿಲ್ಲೆಯಲ್ಲಿ ಡಿ. ವೈ.ಎಸ್.ಪಿ. ಕೊಪ್ಪಳ ಮತ್ತು ಡಿ.ವೈ.ಎಸ್.ಪಿ, ಗಂಗಾವತಿ ನೇತೃತ್ವದಲ್ಲಿ ಡಕಾಯತಿ ನಿರೋಧಕ ದಳಗಳನ್ನು ರಚಿಸಲಾಗಿದೆ.
4. ಹೊರವಲಯದಲ್ಲಿ ಒಂಟಿ ಮನೆಗಳಿಗೆ ಸೈರನ್‌ಗಳನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿದೆ.
5. ಬಸ್‌ನಿಲ್ದಾಣ ಮತ್ತು ರೈಲ್ವೆ ನಿಲ್ದಾಣ ಡಾಬಾ ಮತ್ತು ಹೋಟೆಲ್‌ಗಳ ಹತ್ತಿರ ಸಂಶಯಾಸ್ಪದವಾಗಿ ಓಡಾಡುವ ಅಪರಿಚಿತ ವ್ಯಕ್ತಿಗಳ ಮೇಲೆ ನಿಗಾಇಡಲಾಗಿದೆ.
6. ಕಳ್ಳತನ ಮಾಲುಗಳನ್ನು ತೆಗೆದುಕೊಳ್ಳುವವರ ಮೇಲೆನಿಗಾ ವಹಿಸಲಾಗುತ್ತಿದೆ.
7. ಹಳ್ಳಿಗಳಲ್ಲಿ ಗ್ರಾಮ ರಕ್ಷಣಾ ದಳಪತಿಗಳಿಗೆ ತಿಳುವಳಿಕೆ ನೀಡಿ ಚುರುಗುಗೊಳಿಸಲಾಗುತ್ತಿದೆ.
8. ಗ್ರಾಮಾಂತರ ಪ್ರದೇಶಗಳಲ್ಲಿ ಗಸ್ತು ವ್ಯವಸ್ಥೆಯನ್ನು ಬಲಪಡಿಸಲಾಗಿದೆ.

ಆ) ಇಲ್ಲ.

ಶ್ರೀ ಕರಡಿ ಸರಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, 1999-2000ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದರೋಡೆ, ಸುಲಿಗೆ, ಸಂಶಯಾಸ್ಪದ ಸಾವುಗಳು ಎಷ್ಟು ನಡೆದಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಯವರು ದರೋಡೆ 10, ಸುಲಿಗೆ 3, ಸಂಶಯಾಸ್ಪದ ಸಾವು 12, ಮತ್ತು 20 00ನೇ ಸಾಲಿನಲ್ಲಿ ದರೋಡೆ ಪ್ರಕರಣ 1, ಸಂಶಯಾಸ್ಪದ ಸಾವು 4, ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ತಡೆಯುವುದುಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೆಂದು ಕೇಳಿದ ಪ್ರಶ್ನೆಗೆ ಜಿಲ್ಲೆಯಲ್ಲಿ ಗಸ್ತು ಹಾಕುವತಂಹ ಕಾರ್ಯಕ್ರಮ ವಿರಬಹುದು, ರಾತ್ರಿ ವಾಹನಗಳಲ್ಲಿ ಪೋಲೀಸ್ ಗಸ್ತಿನೊಂದಿಗೆ ತಿರುಗಾಡವಂತಹ ಕೆಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ಅದಕ್ಕೆ ನಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತೇವೆ. ಆದರೆ ಈಗ 10 ದರೋಡೆ ಪ್ರಕರಣಗಳು ಮತ್ತು 3 ಸುಲಿಗೆ, ಹಾಗೂ 12 ಸಂಶಯಾಸ್ಪದ ಸಾವು, ಈ ಪ್ರಕರಣಗಳು ತನಿಖೆ ಮಟ್ಟದಲ್ಲಿ, ಏನಾಗಿವೆ? ಈ ವಿವರಗಳನ್ನು ಮಾನ್ಯ ಗೃಹ ಮಂತ್ರಿಯವರು ನೀಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇವುಗಳು ಈಗಾಗಲೇ ತನಿಖೆಯ ಹಂತದಲ್ಲಿದೆ, ಅನೇಕ ಸಾರಿ ಈ ದರೋಡೆ, ಕಳ್ಳತನ ಮಾಡುವಂತಹ ಗ್ಯಾಂಗ್‌ಗಳನ್ನು ನಾವು ಹಿಡಿಯ ಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಕೆಲವು ಸಲ ಈ ಕಳ್ಳತನ ಮಾಡಿರುವಂಥವರು ಸ್ಥಳೀಯರಾಗಿರುವುದಿಲ್ಲ. ಅವರು ಹೊರಗಿನ ಅಂದರೆ ಮಹಾರಾಷ್ಟ್ರ, ಆಂಧ್ರಪ್ರದೇಶ ತಮಿಳುನಾಡು, ಮಧ್ಯಪ್ರದೇಶ ಈ ರಾಜ್ಯಗಳ ಗ್ಯಾಂಗ್‌ಗಳು ಬರುತ್ತವೆ. ಅದಕ್ಕೆ ನಾವು ಯಾವ ಗ್ಯಾಂಗ್ ಎಲ್ಲಿ ದರೋಡೆ ಮಾಡಿದೆ ಎನ್ನುವ ಬಗ್ಗೆ ತನಿಖೆ ನಡೆಯಲು ಸ್ಪೇಷಲ್ ಟೀಮ್ ಕಳುಹಿಸಿದ್ದೇವೆ. ಎಲ್ಲೆಲ್ಲಿ ಇಂತಹ ಪ್ರಕರಣಗಳು ನಡೆಯುತ್ತವೆ, ಅಂತಹ ಪ್ರಕರಣಗಳನ್ನು ಹೊರ ತರುವುದಕ್ಕೋಸ್ಕರ ನಾವು ಡಿಒಎಸ್‌ಪಿ, ಇನ್‌ಸ್ಪೆಕ್ಟರ್ ಗಳ ಒಂದು ಟೀಮ್ ಮಾಡಿ ಕಳುಹಿಸುತ್ತೇವೆ; ಎಲ್ಲೆಲ್ಲಿ ಸಂಶಯ ಬರುತ್ತದೆ. ಅಂತಹ ಕಡೆಗಳಲ್ಲಿ ದರೋಡೆ, ಸುಲಿಗೆ ಮಾಡುವವರು ಜನರಲ್ ಆಗಿ ಯಾವ ಏರಿಯಾದಲ್ಲಿರುತ್ತಾರೆ. ಅಂತಹ ಕಡೆಗಳಲ್ಲಿ ಸ್ಥಳೀಯ ಪೋಲೀಸರಿಂದ ವಿಷಯ ತಿಳಿದಿಕೊಂಡು ಮುಂದಿನ ವ್ಯವಸ್ಥೆಯನ್ನು ಮಾಡುತ್ತೇವೆ. ಆದುದರಿಂದ ಇದು ಇನ್ನೂ ಇನ್‌ವೆಸ್ಟಿಗೇಶನ್ ಸ್ಟೇಜ್‌ನಲ್ಲಿದೆ, ನಾವು ಈ ಎಲ್ಲಾ ಪ್ರಕರಣಗಳಲ್ಲೂ ಸೂಕ್ತ ಕ್ರಮವನ್ನು ಜರುಗಿಸುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ನನ್ನ ಎರಡನೆಯ ಪ್ರಶ್ನೆಗೆ ದರೋಡೆ, ಸುಲಿಗೆ ಸಂಶಯಾಸ್ಪದ ಸಾವುಗಳಿಗೆ ಹೊರ ರಾಜ್ಯದ ಗ್ಯಾಂಗ್‌ಗಳ ಕೈವಾಡವಿದೆಯಾ ಎಂದು ಕೇಳಿದರೆ ಇಲ್ಲವೆಂದು ಹೇಳಿದ್ದಾರೆ. ಆದರೆ ಇವರು ಹೇಳುವಾಗ ಕೆಲವು ದರೋಡೆ, ಸುಲಿಗೆ ಪ್ರಕರಣಗಳಲ್ಲಿ ಹೊರ ರಾಜ್ಯಗಳ ಕೈವಾಡವಿದೆ ಎನ್ನುವುದನ್ನು ಸ್ಪಷ್ಟ ಮಾಡಿದ್ದಾರೆ. ಅದಕ್ಕೋಸ್ಕರ ಹೊರರಾಜ್ಯದ ಮಾಫೀಯಾ ಗ್ಯಾಂಗ್‌ಗಳ ಕೈವಾಡವಿಲ್ಲವೆನ್ನುವುದು ಮತ್ತು ನಾವು ಇನ್‌ವೆಸ್ಟಿಗೇಶನ್ ಬಗ್ಗೆ ಕೇಳುವಂತಹ ಹಂತದಲ್ಲಿ ಇವು ಹೊರ ರಾಜ್ಯಗಳಿಂದಲೂ ನಡೆಯುವಂತಹ ಪ್ರಕರಣಗಳು ಉಂಟು ಎನ್ನುವ ಮಾತು ಬಂದರೆ ಇದು ನಿಖರವಾದಂತಹ ಉತ್ತರವಲ್ಲವೆಂದು ನನಗನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಉತ್ತರದಲ್ಲಿ ಸಾವಿಗೆ ಈಡಾಗಿರುವುದರ ಬಗ್ಗೆ ಇಲ್ಲವೆಂದು ಹೇಳಿದ್ದೇವೆ. ಆದರೆ ದರೋಡೆಯ ಬಗ್ಗೆ ನಾವು ಹಾಗೆ ಊಹೆ ಮಾಡುವುದಕ್ಕಾಗುವುದಿಲ್ಲ, ತನಿಖೆ ಪೂರ್ತಿ ಮಾಡಿ ಅಪರಾಧಿಗಳನ್ನು ಹಿಡಿಡಿಯುವವರೆಗೂ ನಮಗೆ ಅನೇಕಸಾಲಿ ಗೊತ್ತಾಗುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳಿದ್ದೇನೆ ಹೊರತಾಗಿ ಈ ದರೋಡೆ, ಸುಲಿಗೆ, ಕಳ್ಳತನ ಮಾಡುವವರಲ್ಲಿ ಅನೇಕ ಸಾರಿ ಹೊರಗಿನವರು ಇರುತ್ತಾರೆ. ಇಲ್ಲಿನವರು ಇರುತ್ತಾರೆ. ಆದುದರಿಂದ ನಾನು ಆ ಒಂದು ಅರ್ಥದಲ್ಲಿ ಹೇಳಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, ಕೊಪ್ಪಳ ಜಿಲ್ಲೆಯು ಹೊಸ ಜಿಲ್ಲೆಯಾ ಗಿದೆ, ಅಲ್ಲಿ ಸಂಚಾರಿ ಪೋಲೀಸ್ ಠಾಣೆ ಬೇಕೆಂದು ಕೇಳಿದ್ದೇವೆ. ಅದಕ್ಕೆ ಅವರು ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ, ನಿರ್ದಿಷ್ಟವಾಗಿ ಯಾವಾಗ ಪ್ರಾರಂಭ ಮಾಡುತ್ತಾರೆಂದು ಮಾನ್ಯ ಗೃಹ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆ ಹೊಸ ಜಿಲ್ಲೆ ಯಾಗಿದ್ದು ಅದಕ್ಕೆ ಸಂಚಾರಿ ಪೋಲೀಸ್ ಠಾಣೆ ಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಪ್ರಾಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ, ಖಂಡಿತವಾಗಿಯೂ ಹೊಸದಾಗಿ ಠಾಣೆಗಳನ್ನು ಸ್ಯಾಂಕ್ಷನ್ ಮಾಡುವಾಗ ಆ ಕೊಪ್ಪಳ ಜಿಲ್ಲೆಗೂ ಸಂಚಾರಿ ಪೋಲೀಸ್ ಠಾಣೆ ಕೊಡುವ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.